ಕರ್ನಾಟಕ ವಿಧಾನ ಸಭೆ

ಸೋಮವಾರ ೩ನೇ ಅಕ್ಟೋಬರ್ ೧೯೮೮

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ

೧೧-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆಗಳು

ಅಧ್ಯಕ್ಷರು.—೧. ಪಾಕಿಸ್ತಾನದ ಜನರಲ್ ಜಿಯ ಉಲ್ ಹಕ್ ಅವರು ದಿನಾಂಕ ೧೭-೮-೮೮ ರಂದು ವಿಮಾನ ಅಪಘಾತದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ಮಾನ್ಯರು ೧೯೭೭ರ ಜುಲೈ ತಿಂಗಳಿನಿಂದ ಪಾಕಿಸ್ತಾನದ ಮುಖ್ಯ ಸೇನಾಧಿಕಾರಿಯಾಗಿ ಹಾಗೂ ೧೯೭೮ರ ಸೆಪ್ಟೆಂಬರ್‌ನಿಂದ ಪಾಕಿಸ್ತಾನದ ಅಧ್ಯಕ್ಷರಾಗಿದ್ದರು. ಶ್ರೀಯುತರು ಇಸ್ಲಾಮಿಕ್ ಪಾಕಿಸ್ತಾನದ ನಿರ್ಮಾಣದ ಬಗ್ಗೆ ತೀವ್ರವಾದ ಆಸಕ್ತಿ ಹೊಂದಿದ್ದರು.

೨. ವಿಧಾನಸಭಾ ಸದಸ್ಯರಾದ ಶ್ರೀ ಆರ್.ಟಿ. ದೇಸಾಯಿಯವರು ದಿನಾಂಕ ೨೭ನೇ ಜೂನ್ ೧೯೮೮ ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ಮಾನ್ಯರು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣಕ್ಕಾಗಿ ಬಹುವಾಗಿ ಶ್ರಮಿಸಿರುತ್ತಾರೆ. ಅಲ್ಲದೆ ಬಡಜನರಿಗೆ ಸುಮಾರು ೧೨,೦೦೦ ಎಕರೆ ಭೂಮಿಯನ್ನು ದಾನ ಮಾಡಿರುತ್ತಾರೆ. ಮಾನ್ಯರು ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿ ಹಾಗೂ ಇನ್ನಿತರ ಗೌರವಾನ್ವಿತ ಸ್ಥಾನಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಐದನೇ ವಿಧಾನಸಭೆಯ ಸದಸ್ಯರಾಗಿಯೂ ಸೇವೆಯನ್ನು ಸಲ್ಲಿಸಿದ್ದರು. ಪ್ರಸ್ತುತ ವಿಧಾನ ಸಭಾ ಸದಸ್ಯರಾಗಿದ್ದು ಶ್ರೀಯುತರು ಹಕಾತ್ ಆಗಿ ವಿಧಿವಶರಾಗಿರುತ್ತಾರೆ.

೩. ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಎನ್.ಬಿ. ಸರ್ದೇಸಾಯಿರವರು ದಿನಾಂಕ ೨೩-೬-೧೯೮೮ ರಂದು ನಿಧನರಾದರು. ಮಾನ್ಯರು ನಾಲ್ಕು, ಐದು ಹಾಗೂ ಆರನೇ ವಿಧಾನ ಸಭೆಯ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೪. ಮಾಜಿ ವಿಧಾನ ಸಭೆಯ ಸದಸ್ಯೆ ಶ್ರೀಮತಿ ಸುಶೀಲಭಾಯಿ ಹೀರಾಚಾಂದ್ ಷಾ ಅವರು ದಿನಾಂಕ ೧೫-೭-೧೯೮೮ ರಂದು ನಿಧನರಾದರು. ಇವರು ಎರಡು ಮತ್ತು ಮೂರನೇ ವಿಧಾನಸಭೆಯ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೫. ಮಾಜಿ ವಿಧಾನಸಭಾ ಸದಸ್ಯರಾಗಿದ್ದ ಶ್ರೀ ಕೆ. ಲಕ್ಷ್ಮಣ್‌ರವರು ದಿನಾಂಕ ೧೭-೭-೧೯೮೮ ರಂದು ನಿಧನರಾದರು. ಮಾನ್ಯರು ಕರ್ನಾಟಕ ಕೈಗಾರಿಕಾ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿದ್ದರು. ಶ್ರೀಯುತರು ಆರನೇ ವಿಧಾನಸಭಾ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೬. ಮಾಜಿ ವಿಧಾನಸಭಾ ಸದಸ್ಯರಾಗಿದ್ದ ಶ್ರೀ ಬಿ. ನಂಜಪ್ಪನವರು ದಿನಾಂಕ ೭-೮-೧೯೮೮ ರಂದು ನಿಧನರಾದರು. ಮಾನ್ಯರು ಮೂರನೇ ವಿಧಾನಸಭಾ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಪಾಕಿಸ್ತಾನದ ಅಧ್ಯಕ್ಷರಾಗಿದ್ದ ಜನರಲ್ ಜಿಯ ಉಲ್ ಹಕ್ ಅವರು ಮರಣ ಹೊಂದಿದ್ದಾರೆ. ಅವರು ವಿಮಾನ ದುರಂತದಲ್ಲಿ ಮರಣ ಹೊಂದಿದ್ದಾರೆ. ಅವರು ನಮ್ಮ ರಾಷ್ಟ್ರದ ಜೊತೆಗೆ ಸುಮಧುರ ಸಂಬಂಧಗಳನ್ನು

ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದರು. ಆದ್ದರಿಂದ ಅವರ ಮರಣದ ಬಗ್ಗೆ ನನ್ನ ದುಃಖವನ್ನು ಸೂಚಿಸುತ್ತಾ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ.

ಇನ್ನು ವಿಧಾನಸಭಾ ಸದಸ್ಯರುಗಳ ಪೈಕಿ ಅತ್ಯಂತ ಪ್ರಭಾವಿ ಶಾಸಕರಾಗಿದ್ದ ಶ್ರೀ ಆರ್. ಟಿ. ದೇಸಾಯಿಯವರು ನಮ್ಮನ್ನೆಲ್ಲಾ ಅಗಲಿ ಹೋಗಿದ್ದಾರೆ. ಶ್ರೀ ದೇಸಾಯಿ ಅವರು ಆಗರ್ಭಶ್ರೀಮಂತ ಮನೆತನದಿಂದ ಬಂದವರಾಗಿದ್ದರೂ ಸಹ ಶ್ರೀಸಾಮಾನ್ಯರ ಜೊತೆಗೆ ಒಳ್ಳೆಯ ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಇದರ ಜೊತೆಗೆ ಅವರ ಕ್ಷೇತ್ರ ಅಭಿವೃದ್ಧಿಗಾಗಿ ಹಗಲಿರುಳು ಕೆಲಸ ಮಾಡುತ್ತಿದ್ದರು. ಬಿಜಾಪುರ ಜಿಲ್ಲೆಯಲ್ಲಿ ಅವರು ಹಿಂದುಳಿದ ವರ್ಗದ ಜನರ ನಾಯಕರಾಗಿದ್ದರು. ಅವರು ಸ್ಪಷ್ಟವಾದಿಗಳು. ಹಠವಾದಿಗಳು. ಸಾರ್ವಜನಿಕ ಕ್ಷೇತ್ರದಲ್ಲಿ ಯಾವುದೇ ಕೆಲಸ ಆಗಬೇಕಾದರೆ ಅವರ ಹಠ ಬಹಳವಾಗಿ ಎದ್ದು ಕಾಣುತ್ತಿತ್ತು. ಇಂತಹ ಒಬ್ಬ ನಿಷ್ಠಾವಂತ ಹಿಂದುಳಿದ ವರ್ಗದ ನಾಯಕರನ್ನು ಕಳೆದುಕೊಂಡು ಹಿಂದುಳಿದ ವರ್ಗ ಬಡವಾಗಿದೆ, ನಮ್ಮ ಪಕ್ಷಕ್ಕಂತೂ ಬಹಳ ತುಂಬಲಾರದಷ್ಟು ನಷ್ಟವಾಗಿದೆ. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಮೂರನೆಯದಾಗಿ, ಶ್ರೀ ಎನ್.ಬಿ. ಸರ್‌ದೇಸಾಯಿಯವರು. ಇವರು ಎಂ.ಇ.ಎಸ್. ಸದಸ್ಯರಾಗಿ ಈ ಸಭೆಗೆ ಸತತವಾಗಿ ನಾಲ್ಕು ಬಾರಿ ಆರಿಸಿ ಬಂದಿದ್ದರು. ಅವರೂ ಕೂಡ ಒಬ್ಬ ಕೃಷಿಕ ನಾಯಕರಾಗಿದ್ದರು. ಖಾನಾಪುರದಲ್ಲಿ ಸಕ್ಕರೆ ಕಾರ್ಖಾನೆ ಮಾಡಬೇಕು ಎನ್ನುವುದು ಅವರ ಇಚ್ಛೆಯಾಗಿತ್ತು. ಆ ಬಗ್ಗೆ ಅವರು ನನ್ನ ಹತ್ತಿರ ಬಂದಾಗ ನಾನು ಭೂಮಿಯನ್ನು ಕೊಟ್ಟೆ. ಉತ್ಸಾಹದಿಂದ ಅವರು ಸಾಕಷ್ಟು ಹಣವನ್ನು ಕೂಡಿಸಿದ್ದಾರೆ. ಖಾನಾಪುರದಲ್ಲಿ ಸಕ್ಕರೆ ಕಾರ್ಖಾನೆ ಮಾಡಬೇಕು ಎನ್ನುವುದು ಅವರ ಕನಸಾಗಿತ್ತು. ಈಗಾಗಲೇ ಕೇಂದ್ರ ಸರ್ಕಾರಕ್ಕೆ ಇದಕ್ಕೆ ಅನುಮತಿ ಕೊಡುವ ಬಗ್ಗೆ ರೆಕಮೆಂಡ್ ಮಾಡಿದ್ದೇವೆ. ಅವರ ನೆನಪಿಗಾಗಿ ಈ ಸಕ್ಕರೆ ಕಾರ್ಖಾನೆ ಆ ಭಾಗದಲ್ಲಿ ಅಸ್ತಿತ್ವಕ್ಕೆ ಬರಲಿ ಎಂದು ಹಾರೈಸುತ್ತೇನೆ.

ಅದೇ ರೀತಿ ಶ್ರೀ ಲಕ್ಷ್ಮಣ್‌ರವರು ಮತ್ತು ಶ್ರೀ ಟಿ. ನಂಜಪ್ಪನವರು ಸಮಾಜ ಸೇವಕರಾಗಿ ಶಾಸನಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಬಗ್ಗೆ ದುಃಖ ಸೂಚನೆಯನ್ನು ಮಾಡಿ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹಾರೈಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸನ್ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಜಿಯಾ-ಉಲ್-ಹಕ್ ರವರ ನಿಧನದ ಬಗ್ಗೆ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಸಂತಾಪವನ್ನು ಸೂಚಿಸಿದ್ದಾರೆ. ನಾನೂ ಕೂಡ ಅದರಲ್ಲಿ ಭಾಗಿಯಾಗುತ್ತೇನೆ. ಶ್ರೀಮಾನ್ ಜಿಯಾ-ಉಲ್-ಹಕ್‌ರವರು 11 ವರ್ಷಗಳ ಕಾಲ ಪಾಕಿಸ್ತಾನದ ಅಧ್ಯಕ್ಷರಾಗಿ ಇಸ್ಲಾಮಿಕ್ ಕಂಟ್ರಿಯಲ್ಲಿ ಒಳ್ಳೆಯ ಹೆಸರನ್ನು ಪಡೆದು ಪಾಕಿಸ್ತಾನಕ್ಕೆ ಒಳ್ಳೆಯ ಸರ್ಕಾರವನ್ನು ಕೊಡತಕ್ಕ ಕೆಲಸ ಮಾಡಿದ್ದರು. ಅವರು ವಿಮಾನ ದುರ್ಘಟನೆಯಲ್ಲಿ ನಿಧನ ಹೊಂದಿದ್ದಕ್ಕಾಗಿ ನನ್ನ ಪರವಿಯಿಂದ ಹಾಗೂ ಸದನದ ಎಲ್ಲರ ಪರವಿಯಿಂದ ಸಂತಾಪವನ್ನು ಸೂಚಿಸುತ್ತೇನೆ.

ಶ್ರೀಮಾನ್ ಆರ್.ಟಿ. ದೇಸಾಯಿಯವರು ನನ್ನ ಜೊತೆಯಲ್ಲಿ ಶಾಸಕರಾಗಿದ್ದರು. ಸಭಾ ನಾಯಕರು ಹೇಳಿದಹಾಗೆ ಶ್ರೀಮಾನ್ ದೇಸಾಯಿಯವರು ಸಾವಿರಾರು ಎಕರೆ ಜಮೀನನ್ನು ಹೊಂದಿದ್ದಂಥ ಒಬ್ಬ ದೊಡ್ಡ ಶ್ರೀಮಂತರಾಗಿದ್ದರು ಎಂದು ಹೇಳಬಹುದು. ಅವರಿಗೆ ಎಷ್ಟು ದೊಡ್ಡ ಆಸ್ತಿ ಇತ್ತೋ ಅಷ್ಟೇ ದೊಡ್ಡ ಮನಸ್ಸು ಇತ್ತು. ಅವರು ಆ ಭಾಗದಲ್ಲಿ ರೈತರಿಗಾಗಿ, ಕಾರ್ಮಿಕರಿಗಾಗಿ ಹೆಚ್ಚಿನ ಆಸಕ್ತಿವಹಿಸಿ ಕೆಲಸ ಮಾಡಿದ್ದರು. ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ ಅವರೂ ಕೂಡ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ, ಅದೇರೀತಿ ಶ್ರೀ ಎಸ್.ಬಿ. ಸರ್‌ದೇಸಾಯಿಯವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅದೇರೀತಿ ಶ್ರೀ ಕೆ. ಲಕ್ಷ್ಮಣ್‌ರವರು ನಮ್ಮ ಪಕ್ಷದ ಶಾಸಕರಾಗಿ 1978ರಲ್ಲಿ ಗಾಂಧಿನಗರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಇವತ್ತಿನ ದಿವಸ ಅವರು ನಮ್ಮ ಜೊತೆಯಲ್ಲಿಲ್ಲ. ಆಮೇಲೆ ಶ್ರೀ ಬಿ. ನಂಜಪ್ಪನವರೂ ಕೂಡ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಇವರೆಲ್ಲರಿಗೂ ನಾನು ಸಂತಾಪವನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ನಿಧನ ಹೊಂದಿದ ಸದಸ್ಯರ ಆತ್ಮಕ್ಕೆ ಶಾಂತಿಯನ್ನು ಕೋರಲು ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸಭೆಯು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು.—ಮೃತ ಹೊಂದಿದ ಸದಸ್ಯರ ಕುಟುಂಬದವರಿಗೆ ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿ ಕೊಡಲಾಗುವುದು.

ಪ್ರಶ್ನೋತ್ತರಗಳು

ಚುಕ್ಕಿ ಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಪ್ರಶ್ನೆ 931 (3000) (ಶ್ರೀ ಆರ್. ರಾಮಯ್ಯ) ಮಾನ್ಯ ಸದಸ್ಯರು ಗೈರುಹಾಜರು.

ಖಾಲಿ ಸ್ಥಾನಗಳಿಗೆ ಶಿಕ್ಷಕರ ನೇಮಕದ ಕುರಿತು

932 (2881) ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಈಗಾಗಲೇ ಖಾಲಿ ಇರುವ ಕಾಲೇಜು, ಜೂನಿಯರ್ ಕಾಲೇಜು, ಹೈಸ್ಕೂಲು ಪ್ರಾಥಮಿಕ ಶಾಲಾ ಶಿಕ್ಷಕರ ಸ್ಥಾನಗಳಿಗೆ ನೇಮಕ ಮಾಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಆ) ಯಾವಾಗ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ?

ಇ) ಈಗಿನ ಅವಶ್ಯಕತೆಯಂತೆ ಈ ನೇಮಕ ಮಾಡಲಾಗುವುದೆ ಅಥವಾ ಹಿಂದಿನ ಕೊರತೆಯ ಆಧಾರದ ಮೇಲೆ ನೇಮಕ ಮಾಡಲಾಗುವುದೇ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಖಾಲಿ ಇರುವ ಕಾಲೇಜು ಪ್ರಾಧ್ಯಾಪಕರ ಮತ್ತು ರೆಗ್ಯೂಲರ್ ರೀಡರ್‌ಗಳ ಹುದ್ದೆಯನ್ನು ಭರ್ತಿ ಮಾಡುವುದನ್ನು ಪರಿಶೀಲಿಸಲಾಗುತ್ತಿದೆ. ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ರಾಜ್ಯ ಮಟ್ಟದ ನೇಮಕಾತಿ ಸಮಿತಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದು, ನೇಮಕ ಮಾಡಲು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. ಪ್ರೌಢಶಾಲೆ ಸಹ ಶಿಕ್ಷಕರ ಹುದ್ದೆಗಳ ನೇರ ಭರ್ತಿಗಾಗಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ತುಂಬಲು ಜಿಲ್ಲಾ ಆಯ್ಕೆ ಸಮಿತಿಗಳ ಅರ್ಜಿಗಳನ್ನು ಪಡೆದಿವೆ. ಸಂದರ್ಶನಗಳನ್ನು ನಡೆಸಿ ನೇಮಕಾತಿ ನಡೆಸಲು ಸಿದ್ಧತೆ ಮಾಡಲಾಗಿದೆ.

ಆ) ಎಲ್ಲಾ ಹುದ್ದೆಗಳನ್ನು ತುಂಬಲು ತೀವ್ರಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಒಟ್ಟಾರೆ ಅವಶ್ಯಕತೆಯಂತೆ ನೇಮಕ ಮಾಡಲಾಗುವುದು.

ಶ್ರೀ ಜಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ಸರ್ಕಾರದ ಆಡಳಿತದಲ್ಲಿರುವ ಅನೇಕ ಕಾಲೇಜುಗಳು, ಜೂನಿಯರ್ ಕಾಲೇಜುಗಳು, ಪ್ರೌಢಶಾಲೆಗಳು ಮತ್ತು ಪ್ರಾಥಮಿಕ ಶಾಲೆಗಳಲ್ಲಿ 2-3 ವರ್ಷಗಳಿಂದ ಶಿಕ್ಷಕರ ಹುದ್ದೆಗಳು ಖಾಲಿ ಇದ್ದರೂ ಸಹ ಇನ್ನೂ ಸರ್ಕಾರ ಪರಿಶೀಲನೆ ಮಾಡುತ್ತಿದೆ ಎಂದು ಹೇಳುವುದು ಸರಿಯೇ? ಈ ಕುರಿತು ಅಂತಿಮವಾಗಿ ಯಾವಾಗ ನೇಮಕ ಮಾಡುತ್ತೀರಿ, ಪ್ರಾಥಮಿಕ ಶಾಲೆಗಳನ್ನು ಬಿಟ್ಟು, ಉಳಿದ ಸಂಸ್ಥೆಗಳಲ್ಲಿ ಅಂಶಕಾಲಿಕ ಸಿಬ್ಬಂದಿ ಹಾಕಿಕೊಂಡು ಈಗ ಶಾಲೆಗಳನ್ನು ನಡೆಸಲಾಗುತ್ತಿದೆ. ನನ್ನ ಕ್ಷೇತ್ರವಾದ ಬೈಂದೂರಿನಲ್ಲಿ ಒಂದು ಕಾಲೇಜಿನಲ್ಲಿ ಪ್ರಿನ್ಸಿಪಾಲರು ಮತ್ತು ಲೆಕ್ಚರರ್‌ಗಳನ್ನು ಇಟ್ಟುಕೊಂಡು ಹೀಗೆ ನಡೆಸುತ್ತಿದ್ದಾರೆ. ಮತ್ತು ಕುಶಾಲನಗರದ ಕಾಲೇಜಿನಲ್ಲಿಯೂ ಸಹ ಹೀಗೆ ನಡೆಸುತ್ತಿದ್ದಾರೆ. ಈ ರೀತಿ ಆದರೆ ವಿದ್ಯಾ ಕ್ಷೇತ್ರದ ಗತಿ ಏನು? ಮೂರನೆಯದಾಗಿ ಪ್ರಾಥಮಿಕ ಶಾಲೆಯ ಉಪಾಧ್ಯಾಯರ ನೇಮಕಾತಿ ಬಗ್ಗೆ ಸಂದರ್ಶನ ನಡೆದು, ನೇಮಕಾತಿಗೆ ಎಲ್ಲಾ ಸಿದ್ಧತೆ ಆಗಿದೆ ಎಂದು ಉತ್ತರ ಬಂದಿದೆ. ಇದು ಸತ್ಯಕ್ಕೆ ದೂರವಾದ ಉತ್ತರವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂದರ್ಶನ ನಡೆದು, ನೇಮಕಾತಿಗೆ ಎಲ್ಲ ಸಿದ್ಧತೆ ನಡೆದ ಮೇಲೆ, ನೇಮಕ ಮಾಡಬಾರದೆಂದು ಸರ್ಕಾರದಿಂದ ತಡೆಯಾಜ್ಞೆ ಬಂದಿರುವುದು ನಿಜವಲ್ಲವೇ? ಹೀಗಿರುವಾಗ ನೇಮಕ ಮಾಡುವ ಉದ್ದೇಶ ನಿಮಗೆ ಎಲ್ಲಿದೆ? ತಡೆಯಾಜ್ಞೆಯನ್ನು ಯಾವಾಗ ಪಾಪಸ್ಸು ತೆಗೆದುಕೊಳ್ಳುತ್ತೀರಿ, ಕೊನೇ